KAKB720012332015

Presented on : 26-08-2015
Registered on : 26-08-2015
Decided on : 07.03.2026
Duration : 10 Years 06 Months 12Days

**ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಸೇಡಂ**

**ಉಪಸ್ಥಿತರುಃ**

**ಶ್ರೀ ಬಾಲು,**
ಬಿ.ಎ., ಎಲ್‌ಎಲ್.ಬಿ.,
ಸಿವಿಲ್ ನ್ಯಾಯಾಧೀಶರು
ಹಾಗೂ ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸೇಡಂ

**ಸಿ.ಸಿ.ನಂ.443/2015**

**ದಿನಾಂಕಃ 07 ನೇ ಮಾರ್ಚ್ 2026 ರಂದು**

**ಫಿರ್ಯಾದಿದಾರರುಃ**
ಕರ್ನಾಟಕ ರಾಜ್ಯ (ಸೇಡಂ ಪೊಲೀಸರಿಂದ)

**(ಸಹಾಯಕ ಸರ್ಕಾರಿ ಅಭಿಯೋಜಕರು)**

**- ವಿರುದ್ಧ -**

**ಆರೋಪಿತರುಃ**
1. ಸಿದ್ರಾಮಪ್ಪ ತಂದೆ ದೇವಪ್ಪ ಚಿಟನಳ್ಳಿ ,
ವಯಸ್ಸುಃ *60* ವರ್ಷ, ಉದ್ಯೋಗಃ ನಿವೃತ್ತ ಶಿಕ್ಷಕ,

*2.* ಜಗನಾಥ ತಂದೆ ಸಿದ್ರಾಮಪ್ಪ ಚಿಟನಳ್ಳಿ ,
ವಃ *28* ವರ್ಷ, ಉಃ ಕೂಲಿ ಕೆಲಸ,
ಎಲ್ಲರೂ ಸಾಃ ಕೊಡ್ಲಾ, ತಾಃ ಸೇಡಂ.

**(ಆ-1 ಮತ್ತು 2 ಶ್ರೀ ಪಿ.ಕೆ. ವಕೀಲರು)**

1. ಪ್ರಕರಣ ನಡೆದ ದಿನಾಂಕ : 13.04.2015
2. ಪ್ರಕರಣ ದಾಖಲಾದ ದಿನಾಂಕ : 16.04.2015
3. ಫಿರ್ಯಾದಿದಾರರ ಹೆಸರು : ಶ್ರೀ ದೇವಿಂದ್ರಪ್ಪ ತಂದೆ ಕಾಶಪ್ಪ ನೂಲಿ
4. ಸಾಕ್ಷಿಗಳ ವಿಚಾರಣೆ ಪ್ರಾರಂಭದ ದಿನಾಂಕಃ 05.03.2026

5. ಸಾಕ್ಷಿಗಳ ವಿಚಾರಣೆ ಮುಕ್ತಾಯದ ದಿನಾಂಕಃ 05.03.2026

6. ಆಪಾದನೆಗಳು : ಭಾ.ದಂ.ಸಂ.ಕಲಂ.341,323, 324, 504 ಮತ್ತು 506 ಸಂಗಡ 34.

7. ನ್ಯಾಯಾಧೀಶರ ತೀರ್ಮಾನ : ಅಂತಿಮ ಆದೇಶದಂತೆ

ಸಹಿ/-
**(ಬಾಲು)**
**ಸಿವಿಲ್ ನ್ಯಾಯಾಧೀಶರು**
**ಹಾಗೂ ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸೇಡಂ .**

**<u>ತೀರ್ಪು</u>**

ಆರಕ್ಷಕ ಉಪ ನಿರೀಕ್ಷಕರು, ಸೇಡಂ ಪೋಲಿಸ ಠಾಣೆ ಇವರು ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 341, 323, 324, 504 ಮತ್ತು 506 ಸಂಗಡ 34 ರನ್ವಯ ದಂಡನೀಯ ಅಪರಾಧವನ್ನು ಎಸಗಿರುತ್ತಾರೆಂದು ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

2. **<u>ಅಭಿಯೋಜನೆಯ ಮೊಕದ್ದಮ್ಮೆಯ ಸಂಕ್ಷಿಪ್ತ ವಿವರಣೆಃ-</u>**

ದಿನಾಂಕ 13.04.2015 ರಂದು ಸಾಯಂಕಾಲ 07.00 ಗಂಟೆಯ ಸುಮಾರಿಗೆ ಸೇಡಂ ಪೋಲೀಸ ಠಾಣೆಯ ಹದ್ದಿಯಲ್ಲಿ ಬರುವ ಕೊಡ್ಲಾ ಗ್ರಾಮದ ಗೇಟ್ ಹತ್ತಿರ ಚಾಸಾ.1 ನೇದ್ದವನು ಕೊಡ್ಲಾ ಗೇಟ್ ಕಡೆಗೆ ನಡೆದುಕೊಂಡು ಬರುತ್ತಿರುವಾಗ ಆಪಾದಿತ ಸಂಖ್ಯೆ 1 ಮತ್ತು 3 ನೇದ್ದವರು ಫಿರ್ಯಾದಿಗೆ ತಡೆದು ನಿಲ್ಲಿಸಿ ಅವಾಚ್ಯ ಶಬ್ದಗಳಿಂದ ಬೈದು ಕೈಯಿಂದ ಹಾಗೂ ಕಾಲಿನಿಂದ ಒದ್ದಿದಲ್ಲದೆ ಕಲ್ಲಿನಿಂದ ಟೊಂಕಕ್ಕೆ ಹೊಡೆದು ಗುಪ್ತಗಾಯಪಡಿಸಿದರು ಅಲ್ಲದೆ ಜೀವದ ಬೆದರಿಕೆ ಹಾಕಿ ಹೋಗಿರುತ್ತಾರೆ. ಸದರ ಜಗಳವನ್ನು ಚಾಸಾ 4 ಮತ್ತು 5 ರವರು ನೋಡಿದ್ದು ಇರುತ್ತದೆಂದು ಪಿರ್ಯಾದಿಯನ್ನು ನೀಡಿರುತ್ತಾರೆ.

3. ಸದರಿ ಫಿರ್ಯಾದಿಯ ಆಧಾರದ ಮೇಲೆ ಸೇಡಂ ಪೊಲೀಸರು ತಮ್ಮ ಠಾಣಾ ಗುನ್ಹಾ ನಂ.72/2015 ರಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ತನಿಖೆ ಪೂರ್ಣಗೊಂಡ ನಂತರ ಆರೋಪಿತರ ವಿರುದ್ದ ಭಾರತೀಯ ದಂಡ ಸಂಹಿತೆ ಕಲಂ 341, 323, 324, 504 ಮತ್ತು 506 ಸಂಗಡ 34 ರನ್ವಯ ದಂಡನೀಯ ಅಪರಾಧವನ್ನು ಎಸಗಿರುತ್ತಾರೆಂದು ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

4. ದೋಷಾರೋಪಣೆ ಸಲ್ಲಿಸಿದ ನಂತರ ಪ್ರಕರಣದ ಸಂಜ್ಞೆಯನ್ನು ತೆಗೆದುಕೊಂಡು ಆರೋಪಿತರ ವಿರುದ್ದ ಸಮನ್ಸ ಜಾರಿ ಮಾಡಿ, ಆರೋಪಿತರ ಹಾಜರಾತಿಯನ್ನು ಪಡೆಯಲಾಯಿತು. ನಂತರ ಆರೋಪಿತರನ್ನು ಸೂಕ್ತ ಜಾಮೀನ ಮೇಲೆ ಬಿಡುಗಡೆ ಮಾಡಲಾಯಿತು. ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರ ಪ್ರಕಾರ ದೋಷಾರೋಪಣೆ ಪತ್ರದ ನಕಲು ಪ್ರತಿಯನ್ನು ಆರೋಪಿತರಿಗೆ ನೀಡಿ, ದೋಷಾರೋಪಣೆಯನ್ನು ರಚಿಸುವ ಮುನ್ನ ವಾದ ವಿವಾದವನ್ನು ಆಲಿಸಲಾಯಿತು. ನಂತರ ಭಾರತೀಯ ದಂಡ ಸಂಹಿತೆ ಕಲಂ 341, 323, 324, 504 ಮತ್ತು 506 ಸಂಗಡ 34 ರನ್ವಯ ದೋಷಾರೋಪಣೆಯನ್ನು ರಚಿಸಿ ಆರೋಪಿತರಿಗೆ ಓದಿ ಹೇಳಲಾಗಿ, ಸದರಿ ದೋಷಾರೋಪಣೆಯ ಆರೋಪಗಳನ್ನು ಒಪ್ಪಿಕೊಂಡಿರುವುದಿಲ್ಲ ಮತ್ತು ವಿಚಾರಣೆ ನಡೆಯಬೇಕೆಂದು ಕೇಳಿಕೊಂಡಿರುತ್ತಾರೆ.

5. ಅಭಿಯೋಜನೆಯು ಆರೋಪಿತರ ವಿರುದ್ದ ಅಪಾದನೆಗಳನ್ನು ರುಜುವಾತು ಪಡಿಸುವ ಸಲುವಾಗಿ ಚಾಸಾ.1 ರವರನ್ನು ಪ್ರಾಸಾ.1 ಎಂದು ವಿಚಾರಣೆ ಮಾಡಿದ್ದು ಹಾಗೂ ನಿಪಿ.1 ದಾಖಲಾತಿಯನ್ನು ಮತ್ತು ಮು.ಮಾ.1ನ್ನು ಗುರುತಿಸಿಕೊಂಡಿರುತ್ತದೆ. ಅಭಿಯೋಜಕರು ಇನ್ನುಳಿದ ಸಾಕ್ಷ್ಯಗಳ ವಿಚಾರಣೆ ಮಾಡಬೇಕೆಂದು ಕೋರಿರುತ್ತಾರೆ. ಆದರೆ ಪಿ.ಡಬ್ಲ್ಯೂ -1 ರವರು ಪ್ರತಿಕೂಲವಾಗಿ ಸಾಕ್ಷ್ಯ

ನುಡಿದಿರುವುದರಿಂದ, ಅಭಿಯೋಜಕರವರ ವಿನಂತಿಯನ್ನು ತಳ್ಳಿಹಾಕಿ, ಅಭಿಯೋಜನೆಯ ಪರ ಸಾಕ್ಷ್ಯ ವಿಚಾರಣೆಯನ್ನು ಮುಕ್ತಾಯಗೊಳಿಸಲಾಗಿರುತ್ತದೆ.

6. ಪಿ.ಡಬ್ಲ್ಯೂ -1 ರವರು ಅಭಿಯೋಜನೆಗೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿದ್ದರಿಂದ, ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿ ಆರೋಪಿತರ ಹೇಳಿಕೆಯನ್ನು ಕೈ ಬಿಡಲಾಗಿದೆ.

7. ಉಭಯ ಪಕ್ಷಗಾರರ ವಾದ ವಿವಾದವನ್ನು ಆಲಿಸಲಾಯಿತು.

8. ಈ ಕೆಳಕಂಡ ಅಂಶಗಳು ನ್ಯಾಯಾಲಯದ ಪರಿಗಣನೆಗೆ ಬಂದಿರುತ್ತವೆ.

**ಅಂಶಗಳು**

1. ದಿನಾಂಕ 13-04-2015ರಂದು ಸಾಯಂಕಾಲ 07.00 ಗಂಟೆಯ ಸುಮಾರಿಗೆ ಸೇಡಂ ಪೋಲಿಸ ಠಾಣಾ ಹದ್ದಿಯಲ್ಲಿರುವ ಕೊಡ್ಲಾ ಗೇಟ್ ಹತ್ತಿರ ಚಾಸಾ.1 ನೇದ್ದವನು ನಡೆದುಕೊಂಡು ಬರುತ್ತಿದ್ದಾಗ, ಆರೋಪಿತರು ಸಮಾನೋದ್ದೇಶದಿಂದ ಕೂಡಿಕೊಂಡು ಬಂದು ಚಾಸಾ.1 ನೇದ್ದವನಿಗೆ ಮುಂದೆ ಹೋಗದಂತೆ ತಡೆದು ನಿಲ್ಲಿಸಿ, ಸಾರ್ವಜನಿಕ ಸ್ಥಳದಲ್ಲಿ ಅವಾಚ್ಯ ಶಬ್ದಗಳಿಂದ ಬೈದು ಅವಮಾನ ಪಡಿಸಿದ್ದು, ಆ ಮೂಲಕ ಭಾ.ದಂ.ಸಂ.ಕಲಂ 341, 504 ಸಹವಾಚಕ ಕಲಂ 34ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂಬುದನ್ನು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತುಪಡಿಸುತ್ತದೆಯೇ?

2. ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರೆಲ್ಲರೂ ಸಮಾನೋದ್ದೇಶದಿಂದ ಕೂಡಿಕೊಂಡು ಬಂದು, ಚಾಸಾ.1 ನೇದ್ದವನಿಗೆ ಮುಂದೆ ಹೋಗದಂತೆ ತಡೆದು ನಿಲ್ಲಿಸಿ, ಕೈಯಿಂದ ಹಾಗೂ ಕಾಲಿನಿಂದ

ಒದ್ದಿದ್ದಲ್ಲದೇ , ಕಲ್ಲಿನಿಂದ ಟೊಂಕಕ್ಕೆ ಹೊಡದು ಗುಪ್ತಗಾಯ ಪಡಿಸಿದ್ದು, ಆ ಮೂಲಕ ಭಾ.ದಂ.ಸಂ. ಕಲಂ 323 ಮತ್ತು 324 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂಬುದನ್ನು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತುಪಡಿಸುತ್ತದೆಯೇ?

3. ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಸಮಾನೋದ್ದೇಶದಿಂದ ಕೂಡಿಕೊಂಡು ಬಂದು, ಚಾಸಾ.1 ನೇದ್ದವನಿಗೆ ವಿನಾಕಾರಣ ಜಗಳ ತೆಗೆದು ಹೊಡಡಿಬಡಿ ಮಾಡಿದ್ದಲ್ಲದೇ ಜಗಳ ಬಿಟ್ಟು ಹೋಗುವಾಗ ನಿನಗೆ ಜೀವಂತ ಬಿಡುವುದಿಲ್ಲ ಅಂತಾ ಜೀವದ ಬೆದರಿಕೆ ಹಾಕಿದ್ದು, ಆ ಮೂಲಕ ಭಾ.ದಂ.ಸಂ.ಕಲಂ 506 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತಾರೆಂಬುದನ್ನು ಅಭಿಯೋಜನೆಯು ಸಂಶಯಾತೀತವಾಗಿ ಸಾಭೀತುಪಡಿಸುತ್ತದೆಯೇ?

4. ಯಾವ ಆದೇಶ ಅಥವಾ ಶಿಕ್ಷೆ?

9. ಮೇಲ್ಕಾಣಿಸಿದ ಅಂಶಗಳಿಗೆ ನನ್ನ ಉತ್ತರಗಳು ಈ ಕೆಳಗಿನಂತಿವೆಃ

| | | |
|---|---|---|
| ಅಂಶ ನಂ.1 ರಿಂದ 3 | : | **ನಕರಾತ್ಮಕವಾಗಿ.** |
| ಅಂಶ ನಂ.4 | : | ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ |

## <u>ಕಾ ರ ಣ ಗ ಳು</u>

10. **<u>ಅಂಶ ನಂ.1 ರಿಂದ 3:-</u>** ಸದರಿ ಎಲ್ಲಾ ಅಂಶಗಳು ಒಂದಕ್ಕೊಂದು ಅಂತರ್ಗತವಾಗಿರುವುದರಿಂದ, ಚರ್ಚೆಯ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಸದರಿ ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

11. ಈ ಪ್ರಕರಣದಲ್ಲಿ ಅಭಿಯೋಜನೆಯು ಆರೋಪಿತರ ಮೇಲೆ ಆಪಾದಿಸಿದ ಆರೋಪವನ್ನು ಸಾಬೀತು ಪಡಿಸಲು ಚಾ.ಸಾ.1 ದೇವೀಂದ್ರಪ್ಪ ತಂದೆ ಕಾಶಪ್ಪ ಇವರನ್ನು ಪ್ರಾ.ಸಾ.1 ಎಂದು ಸಾಕ್ಷಿ ಮಾಡಿಸಿದ್ದು ಇರುತ್ತದೆ. ಪ್ರಾಸಾ.1 ರವರು ಸದರಿ ಪ್ರಕರಣದ ಪಿರ್ಯಾದಿದಾರರಾಗಿರುತ್ತಾರೆ.

12. ಪ್ರಾಸಾ.1 ರವರು ಈ ಪ್ರಕರಣದ ಪಿರ್ಯಾದಿದಾರರಾಗಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ, ಆರೋಪಿತರು ಗೊತ್ತು. ಆರೋಪಿತರು ಮತ್ತು ನನ್ನ ನಡುವೆ ಯಾವುದೆ ರೀತಿಯ ಗಲಾಟೆ ಆಗಿರುವುದಿಲ್ಲ. ಆರೋಪಿತರು ನನಗೆ ಹೊಡೆ ಬಡೆ ಮಾಡಿ ಜೀವ ಬೆದರಿಕೆ ಹಾಕಿಲ್ಲ ಮತ್ತು ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ. ನಾನು ಯಾವುದೇ ರೀತಿಯ ಪಿರ್ಯಾದನ್ನು ನೀಡಿಲ್ಲ ಮತ್ತು ಈ ಪ್ರಕರಣದ ಬಗ್ಗೆ ಯಾವುದೇ ರೀತಿಯ ಮಾಹಿತಿ ಇಲ್ಲ. ಸಾಕ್ಷಿಯು ದೂರು ದಾಖಲಾತಿ ನೋಡಿ ಗುರುತಿಸಿರುವುದರಿಂದ ಅದನ್ನು ನಿಪಿ.1 ಎಂದು ಗುರುತಿಸಲಾಯಿತು. ಆದರೇ ನಿಪಿ.1ರಲ್ಲಿರುವ ವಿಷಯಗಳು ನನಗೆ ಗೊತ್ತಿಲ್ಲ ಎಂದು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಸರ್ಕಾರಿ ಸಹಾಯಕ ಅಭಿಯೋಜಕರು ಸುದೀರ್ಘ ಕಾಲ ಪಾಟೀ ಸವಾಲು ಮಾಡಿದರೂ ಸಹ ಅಭಿಯೋಜನೆಗೆ ಪೂರಕವಾದಂತಹ ಯಾವುದೇ ಅಂಶಗಳನ್ನು ಅಭಿಯೋಜನೆಯ ಪರ ಹೊರ ತರಲು ಯಶಸ್ವಿಯಾಗಿರುವುದಿಲ್ಲ. ಒಂದು ಕಲ್ಲನ್ನು ಮು.ಮಾ.1 ಎಂದು ಗುರುತಿಸಲಾಗಿರುತ್ತದೆ.

13. ಈ ಪ್ರಕರಣದ ಬಹು ಮುಖ್ಯ ಸಾಕ್ಷಿದಾರರಾದ ಚಾಸಾ.1 ಸದರಿ ಪ್ರಕರಣದ ಪಿರ್ಯಾದಿದಾರರಾಗಿದ್ದು ತಮ್ಮ ಮುಖ್ಯ ವಿಚಾರಣೆಯಲ್ಲಿ ಯಾವುದೇ ಘಟನೆ ನಡೆದ ಬಗ್ಗೆ ಸಾಕ್ಷಿ ಹೇಳಿಲ್ಲ, ಅಲ್ಲದೆ ಚಾಸಾ.1 ರವರು ಅಭಿಯೋಜನೆಗೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುತ್ತಾರೆ, ಆದುದರಿಂದ ಅಭಿಯೋಜನೆಯ ಪ್ರಕರಣದಲ್ಲಿ ಯಾವುದೇ ಹುರುಳಿಲ್ಲ ಅಂತಾ ಕಂಡುಬರುತ್ತದೆ. ಅಭಿಯೋಜಕರು ಇನ್ನುಳಿದ ಸಾಕ್ಷ್ಯಗಳ ವಿಚಾರಣೆ ಮಾಡಬೇಕೆಂದು ಕೋರಿರುತ್ತಾರೆ. ಆದರೆ ಪಿ.ಡಬ್ಲ್ಯೂ -1ರವರು ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ, ಅಭಿಯೋಜಕರವರ

ವಿನಂತಿಯನ್ನು ತಳ್ಳಿಹಾಕಿ, ಅಭಿಯೋಜನೆಯ ಪರ ಸಾಕ್ಷ್ಯ ವಿಚಾರಣೆಯನ್ನು ಮುಕ್ತಾಯಗೊಳಿಸಲಾಗಿರುತ್ತದೆ. ಹಾಗೂ ಅಭಿಯೋಜನೆಯು ಆರೋಪಿತರ ವಿರುದ್ದ ಆಪಾದಿಸಲ್ಪಟ್ಟ ಕೃತ್ಯವನ್ನು ಆರೋಪಿತರು ಎಸಗಿದ್ದಾರೆ ಎನ್ನುವುದನ್ನು ನಿರೂಪಿಸಲು ಬಲವಾದ ಮತ್ತು ಒಪ್ಪಿಕೊಳ್ಳಬಹುದಾದ ಸಾಕ್ಷಾಧಾರಗಳನ್ನು ಒದಗಿಸಿ ನಿರೂಪಿಸುವಲ್ಲಿ ವಿಫಲವಾಗಿದೆ ಎಂದು ಹೇಳಬಹುದು. ಅದೇ ರೀತಿ ಅಭಿಯೋಜನೆಯು ಆರೋಪಿತರ ಕೃತ್ಯ ನಿರೂಪಿಸುವಲ್ಲಿ ವಿಫಲವಾಗಿದೆ. ಆದುದರಿಂದ ಅಭಿಯೋಜನೆಯು ಆರೋಪಿತರ ವಿರುದ್ದ ಆಪಾದನೆಯನ್ನು ಸಂಶಯಾತೀತವಾಗಿ ರುಜುವಾತು ಪಡಿಸಲು ವಿಫಲವಾಗಿದೆ ಎಂದು ಹೇಳುತ್ತಾ ಅಂಶ ಸಂಖ್ಯೆ 1 ರಿಂದ 3ನ್ನು **ನಕಾರಾತ್ಮಕವಾಗಿ** ಉತ್ತರಿಸಿದ್ದೇನೆ.

14. **<u>ಅಂಶ ನಂ.4</u>:-** ಈ ಮೇಲೆ ಹೇಳಿದ ಅಂಶ ನಂ.1 ರಿಂದ 3ರ ಮೇಲಿನ ಚರ್ಚೆಯಂತೆ ಹಾಗೂ ಕಾರಣಗಳಿಗಾಗಿ ಈ ಕೆಳಗಿನಂತೆ ಅಂತಿಮವಾಗಿ ಆದೇಶಿಸಿರುತ್ತೇನೆ.

**<u>ಆ ದೇ ಶ</u>**

**ದಂಡ ಪ್ರಕ್ರಿಯಾ ಸಂಹಿತೆ ಕಲಂ 248 (1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಆರೋಪಿ ನಂ.1 ಮತ್ತು 2ರವರನ್ನು ಭಾರತೀಯ ದಂಡ ಸಂಹಿತೆ ಕಲಂ 341, 323, 324, 504 ಮತ್ತು 506 ಸಂಗಡ 34 ರನ್ವಯ ಶಿಕ್ಷಾರ್ಹ ಅಪರಾಧಗಳಿಗೆ ನಿರ್ದೋಷಿಗಳೆಂದು ಬಿಡುಗಡೆ ಗೊಳಿಸಲಾಗಿದೆ.**

**ಆರೋಪಿತರು ಮತ್ತು ಅವರ ಜಾಮೀನುದಾರರು ಬರೆದುಕೊಟ್ಟ ಜಾಮೀನು ಭದ್ರತೆಗಳನ್ನು 6 ತಿಂಗಳವರೆಗೆ ವಿಸ್ತರಿಸಲಾಗಿದೆ.**

**ಮು.ಮಾ.1 ಒಂದು ಕಲ್ಲು ಯಾವುದೇ ಮೌಲ್ಯ ಹೊಂದಿರದ ವಸ್ತು ಆಗಿರುವುದರಿಂದ ಅದನ್ನು ಅಪೀಲು ಅವಧಿ ಮುಗಿದ ನಂತರ ನಾಶಪಡಿಸಲು ಈ ಮೂಲಕ ಕಚೇರಿಗೆ ಆದೇಶಿಸಲಾಗಿದೆ.**

(ಶೀಘ್ರಲಿಪಿಗಾರರು ನನ್ನ ಉಕ್ತಲೇಖನಕ್ಕೆ ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿದ್ದು, ಸೂಕ್ತ ತಿದ್ದುಪಡಿಗಳನ್ನು ಮಾಡಿದ ನಂತರ ತೆರೆದ ನ್ಯಾಯಾಲಯದಲ್ಲಿ ಇಂದು ದಿನಾಂಕ 07ನೇ ಮಾರ್ಚ್ 2026 ರಂದು ತೀರ್ಪನ್ನು ಘೋಷಿಸಲಾಯಿತು)

ಸಹಿ/-
**(ಬಾಲು)**
**ಸಿವಿಲ್ ನ್ಯಾಯಾಧೀಶರು**
**ಹಾಗೂ ಪ್ರ.ದ.ನ್ಯಾ.ದಂಡಾಧಿಕಾರಿಗಳು,**
**ಸೇಡಂ .**

**<u>ಅನುಬಂಧ</u>**

**<u>ಅಭಿಯೋಜನೆಯ ಪರವಾಗಿ ಮಾಡಿಸಲಾದ ಸಾಕ್ಷ್ಯಗಳು:</u>**

ಪಿ.ಡಬ್ಲ್ಯೂ -1 : ದೇವೀಂದ್ರಪ್ಪ ತಂದೆ ಕಾಶಪ್ಪ

**<u>ಅಭಿಯೋಜನೆಯ ಪರವಾಗಿ ಮಾಡಿಸಲಾದ ಸಾಕ್ಷ್ಯಗಳು:</u>**

ನಿ.ಪಿ.1 : ದೂರು
ನಿಪಿ.1(ಎ) : ಪ್ರಾಸಾ.1ರವರ ಸಹಿ

**<u>ಅಭಿಯೋಜನೆಯ ಪರ ಗುರುತಿಸಲಾದ ಮುದ್ದೆ ಮಾಲುಗಳ ವಿವರ:</u>**

ಮು.ಮಾ.1ಃ ಒಂದು ಕಲ್ಲು

**<u>ಆರೋಪಿತರ ಪರವಾಗಿ ವಿಚಾರಣೆಗೊಳಪಡಿಸಲಾದ ಸಾಕ್ಷಿದಾರರ ವಿವರ:</u>**

- ಇಲ್ಲ -

**<u>ಆರೋಪಿತರ ಪರವಾಗಿ ಗುರುತಿಸಲಾದ ದಾಖಲೆಗಳ ವಿವರ:</u>**

- ಇಲ್ಲ -

ಸಹಿ/-
**(ಬಾಲು)**
**ಸಿವಿಲ್ ನ್ಯಾಯಾಧೀಶರು**
**ಹಾಗೂ ಪ್ರ.ದ.ನ್ಯಾ.ದಂಡಾಧಿಕಾರಿಗಳು,**
**ಸೇಡಂ .**

*********

BALU Digitally signed by BALU Date: 2026.03.07 16:42:19 +0530